# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 56 (ಹಳೇ ವಾರ್ಡ್ ಸಂಖ್ಯೆ-75), 15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

ಸಂಖ್ಯೆ: ವಾ-56/ವಾ.ಸ./ಸಭಾನಡವಳಿ-14/2022-23 ದಿನಾಂಕ: / /2022

-:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 05/11/2022 ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್-56 (ಹಳೇ ವಾರ್ಡ್ ಸಂಖ್ಯೆ-75) ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಬೆನಕೇಶ್ ಆರ್. ವಾರ್ಡ್ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಭಂಧಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಶ್ರೀ ಬೆನಕೇಶ್ ಆರ್. ರವರು ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದವರು:-**

| | |
|---|---|
| 1 | ಶ್ರೀ.ಎಮ್.ಬಿ.ನಾಗರಾಜ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-56, ಬಿಬಿಎಂಪಿ |
| 2 | ಶ್ರೀ ಬೆನಕೇಶ್ ಆರ್. ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-56, ಬಿಬಿಎಂಪಿ |
| 3 | ಶ್ರೀ ಲೋಕೇಶ್ ಎಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 4 | ಶ್ರೀ ಕೆ. ವಿ. ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 5 | ಕುಮಾರಿ ಭುವನ ಜಿ. ಎಸ್. ಸಹಾಯಕ ಅಭಿಯಂತರರು, ಬೃನೀ..ಕಾ. ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ |
| 6 | ಕುಮಾರಿ ದೀಪ್ತಿ ಎಸ್. ಪಾಲ್ ಸಹಾಯಕ ಅಭಿಯಂತರರು, ಬೃನೀ..ಕಾ. ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ |
| 7 | ಶ್ರೀ ಸಿದ್ದರಾಮೇಶ್ವರ್ ಆರ್. ಎಸ್. ಕಂದಾಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 8 | ಶ್ರೀ ನಿರಂಜನ್ ಎನ್. ಸಿ., ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-56, ಬಿಬಿಎಂಪಿ. |
| 9 | ಶ್ರೀ ಗಿರೀಶ್ ಬಿ., ಕಾಮಗಾರಿ ಪರಿವೀಕ್ಷಕರು, ಎನ್‌ಡಬ್ಲ್ಯು-2 ಉಪವಿಭಾಗ, ಬಿಡಬ್ಲ್ಯುಎಸ್ಎಸ್‌ಬಿ. |
| 10 | ಶ್ರೀ ಚನ್ನವೀರಯ್ಯ, ಹೆಡ್‌ಗ್ಯಾಂಗ್‌ಮೆನ್, ವಾರ್ಡ್-56, ಬಿಬಿಎಂಪಿ. |
| 11 | ಶ್ರೀಮತಿ ಉಮಾದೇವಿ ಹೆಚ್., ಪಿಹೆಚ್‌ಸಿಓ, ಆರೋಗ್ಯ ಕೇಂದ್ರ, ವಾರ್ಡ್-56, ಬಿಬಿಎಂಪಿ. |
| 12 | ಶ್ರೀಮತಿ ಹೇಮಲಾತಾ ಆರ್., ಪಿಹೆಚ್‌ಸಿಓ, ಆರೋಗ್ಯ ಕೇಂದ್ರ, ವಾರ್ಡ್-56, ಬಿಬಿಎಂಪಿ. |
| 13 | ಶ್ರೀ ವಿನೋದ್ ಕುಮಾರ್, ವಾರ್ಡ್ ಮಾರ್ಷಲ್, ವಾರ್ಡ್-56, ಬಿಬಿಎಂಪಿ. |
| 14 | ಶ್ರೀ ವಿ. ವಾಸುದೇವರಾವ್, ಉದ್ಯಾನವನಗಳ ನಿರ್ವಹಣೆ ಗುತ್ತಿಗೆದಾರರು, ವಾರ್ಡ್-56, ಬಿಬಿಎಂಪಿ. |
| 15 | ಶ್ರೀ ಮನೋಜ್ ಕೆ, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ವಿದ್ಯುತ್ ವಿಭಾಗ, ವಾರ್ಡ್-56, ಬಿಬಿಎಂಪಿ. |
| 16 | ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು, ವಾರ್ಡ್-56. |
| 17 | ಶ್ರೀಮತಿ ಶಾಮಲ ಎಸ್. ಎಲ್. ವಾರ್ಡ್‌ನ ನಾಗರೀಕರು, ವಾರ್ಡ್-56. |
| 18 | ಶ್ರೀಮತಿ ಡಾ. ರಮ್ಯ ಶೆಟ್ಟಿ, ವಾರ್ಡ್‌ನ ನಾಗರೀಕರು, ವಾರ್ಡ್-56. |
| 19 | ಶ್ರೀ ಕೆ. ಗಣೇಶ್, ವಾರ್ಡ್‌ನ ನಾಗರೀಕರು, ವಾರ್ಡ್-56. |
| 20 | ಶ್ರೀ ಎನ್. ವಿ. ಬಾಹುಬಲಿ, ವಾರ್ಡ್‌ನ ನಾಗರೀಕರು, ವಾರ್ಡ್-56. |

ಮು.ತಿ.ನೋ.

Scanned by CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1. ಆರೋಗ್ಯ ಇಲಾಖೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್-56 ಶಂಕರಮಠದಲ್ಲಿ ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಮಾಹಿತಿಗಳು ಹಾಗೂ ತೊಂದರೆಗಳ ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
- ಶ್ರೀಮತಿ ಉಮಾದೇವಿ ಹೆಚ್., ಪಿ.ಹೆಚ್.ಸಿ.ಓ., ವಾರ್ಡ್-56 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಯಾವುದೇ ಕೋವಿಡ್ ಕೇಸ್ ಪತ್ತೆಯಾಗಿರುವುದಿಲ್ಲ. ಹಾಗೂ ಕೋವಿಡ್ ವ್ಯಾಕ್ಸಿನೇಷನ್ ನೀಡಲಾಗುತ್ತಿದ್ದು, ಅಗತ್ಯವಿರುವ ಸಾರ್ವಜನಿಕರು ಪಡೆದುಕೊಳ್ಳಬಹುದಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

2. ಅಭಿಯಂತರರ ವಿಭಾಗದ ಬಗ್ಗೆ:-

- ಶ್ರೀ ಸಿದ್ಧರಾಜು ಸೋಸಲೆ, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಎಸ್.ವಿ.ಕೆ. ಲೇಔಟ್ 3ನೇ ಅಡ್ಡರಸ್ತೆಯಲ್ಲಿರುವ ಚಿಣ್ಣರಧಾಮ ಮಕ್ಕಳ ಆಟದ ಮೈದಾನದಲ್ಲಿರುವ ಆಟದ ಉಪಕರಣಗಳು ಹಾಳಾಗಿರುವುದರಿಂದ ಅದನ್ನು ಸರಿಪಡಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
- ಸಹಾಯಕ ಅಭಿಯಂತರರು, ವಾರ್ಡ್-56 ರವರು ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಲಭ್ಯವಾಗುವ ಯಾವುದಾದರೂ ಅನುದಾನದಡಿಯಲ್ಲಿ ಸದರಿ ಕಾಮಗಾರಿಯನ್ನು ಸೇರಿಸಿಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

3. ಪಶುಪಾಲನೆ ವಿಭಾಗದ ಬಗ್ಗೆ:-

- ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್‌ನಲ್ಲಿನ ಚಿಕ್ಕನ್ ಮತ್ತು ಮಟನ್ ಸ್ಟಾಲ್‌ಗಳಿಗೆ ಚಿಕ್ಕನ್ ವೇಸ್ಟೇಜ್‌ಗಳನ್ನು ಸರಿಯಾದ ರೀತಿಯಲ್ಲಿ ಡಿಸ್ಪೋಸ್ ಮಾಡುವಂತೆ ಎಚ್ಚರಿಕೆ ನೀಡುವಂತೆ ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತವೆ. ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಹಾಗೂ ಗರ್ಭನಿರೋಧಕ ಚಿಕಿತ್ಸೆಯನ್ನು ಮಾಡಲು ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ತಿಳಿಸುವಂತೆ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

4. ಕಂದಾಯ ವಿಭಾಗದ ಬಗ್ಗೆ:-

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಎಂದಿನಂತೆ ವಾರ್ಡ್ ವ್ಯಾಪ್ತಿಯಲ್ಲಿ ಸಂಗ್ರಹವಾದ ಕಂದಾಯದ ಮೊತ್ತದ ಬಗ್ಗೆ ವರದಿ ನೀಡುವಂತೆ ಕಂದಾಯ ಪರಿವೀಕ್ಷಕರು ರವರಿಗೆ ತಿಳಿಸಿದರು.
- ಶ್ರೀ ಸಿದ್ಧರಾಮೇಶ್ವರ್ ಆರ್.ಎಸ್., ಕಂದಾಯ ಪರಿವೀಕ್ಷಕರು, ವಾರ್ಡ್-56, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಕಂದಾಯ ಸಂಗ್ರಹಣೆಯಾಗುತ್ತಿದ್ದು, 2022-23ನೇ ಸಾಲಿನಲ್ಲಿ 01-ಏಪ್ರಿಲ್-2022 ರಿಂದ ಇಲ್ಲಿಯವರೆಗೆ ಬಾಕಿ ಹಾಗೂ ಪ್ರಸ್ತುತ ಸಾಲಿನ ಒಟ್ಟು ಮೊತ್ತ ರೂ. 4.47 ಕೋಟಿಗಳಷ್ಟು ಕಂದಾಯ ಸಂಗ್ರಹವಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

5. ಅರಣ್ಯ ವಿಭಾಗದ ಬಗ್ಗೆ:-

- ಶ್ರೀಮತಿ ಪದ್ಮ ಪ್ರಕಾಶ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ 3ನೇ ಹಂತ ಕಿರ್ಲೋಸ್ಕರ್ ಕಾಲೋನಿಯ 1ನೇ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ಕಲ್ವರ್ಟ್ ನಿರ್ಮಾಣ ಕಾಮಗಾರಿಯು ನಡೆಯುತ್ತಿದ್ದು, ಮರವೊಂದು ಅಡ್ಡವಾಗಿರುತ್ತದೆ ಆದುದರಿಂದ ಸದರಿ ಮರವನ್ನು ತೆರವುಗೊಳಿಸಬೇಕಾಗಿ ಸಭೆಯಲ್ಲಿ ಕೋರಿದರು.
- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಶೀಘ್ರವಾಗಿ ಸದರಿ ಸ್ಥಳಕ್ಕೆ ಭೇಟಿ ನೀಡಿ ಅವಶ್ಯವಿದ್ದಲ್ಲಿ ತೆರವುಗೊಳಿಸಲು ಸೂಕ್ತ ಕ್ರಮವಹಿಸಲು ಅರಣ್ಯ ವಿಭಾಗದ ಮೇಸ್ತ್ರಿ ಶ್ರೀ ಮಲ್ಲಪ್ಪ ರವರಿಗೆ ತಿಳಿಸಲು ಸಹಾಯಕ ಅಭಿಯಂತರರು, ವಾರ್ಡ್-56 ರವರಿಗೆ ಸಭೆಯಲ್ಲಿ ಹೇಳಿದರು.

6. ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-

- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಹೆಚ್ಚಾಗಿ ಕಸ ಬೀಳುವ ಜಾಗಗಳಲ್ಲಿ ಕಸ ಹಾಕದಂತೆ ತಡೆಯಲು ರಾತ್ರಿ ವೇಳೆಯಲ್ಲಿ ಮಾರ್ಷಲ್‌ಗಳೊಂದಿಗೆ ಪರಿವೀಕ್ಷಣೆ ಮಾಡುವುದು ಹಾಗೂ ಯಾವುದೇ ದೂರುಗಳು ಬಾರದಂತೆ ಕಸ ಸಂಗ್ರಹಣೆ ಮತ್ತು ಕಸ ವಿಲೇವಾರಿ ಆಟೋಗಳನ್ನು ಸರಿಯಾಗಿ ನಿರ್ವಹಣೆ -

ಪು.ತಿ.ನೋ.

Scanned by CamScanner

-ಮಾಡಲು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ನಿರಂಜನ್ ಎಸ್. ಸಿ, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

7. **ತೋಟಗಾರಿಕೆ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಎಲ್ಲಾ ಉದ್ಯಾನವನಗಳಲ್ಲಿ ಯಾವುದೇ ದೂರುಗಳು ಬಾರದಂತೆ ಉತ್ತಮ ಸ್ವಚ್ಛತೆಯನ್ನು ಕಾಪಾಡಿಕೊಂಡು ಉತ್ತಮವಾದ ನಿರ್ವಹಣೆಯನ್ನು ಮಾಡಬೇಕಾಗಿ ಮತ್ತು ಮುಂದಿನ ಸಭೆಯಲ್ಲಿ ಇದಕ್ಕೆ ಸೂಕ್ತ ವರದಿಯನ್ನು ನೀಡುವಂತೆ ಶ್ರೀ ವಿ. ವಾಸುದೇವರಾವ್, ಉದ್ಯಾನವನಗಳ ನಿರ್ವಹಣೆ ಗುತ್ತಿಗೆದಾರರು, ವಾರ್ಡ್-56, ಬಿಬಿಎಂಪಿ ರವರಿಗೆ ತಿಳಿಸಿದರು.

8. **ಬೃಹತ್ ನೀರು ಕಾಲುವೆ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿರವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ಶ್ರೀ ಬಾಹುಬಲಿ, ವಾರ್ಡ್‌ನ ನಾಗರೀಕರು ರವರು ಕಿರ್ಲೋಸ್ಕರ್ ಕಾಲೋನಿ 3ನೇ ಹಂತದ 5ನೇ ಅಡ್ಡರಸ್ತೆಯಲ್ಲಿರುವ ನೈಸರ್ಗಿಕ ಕಾಲುವೆಯನ್ನು ತಿರುವು ಮಾಡಿರುವ ಬಗ್ಗೆ ಸರ್ವೇ ಮಾಡಲು ಸರ್ವೇಯರ್ ಅನ್ನು ಕರೆಸುವ ಬಗ್ಗೆ ಬೃಹತ್ ನೀರು ಕಾಲುವೆ ವಿಭಾಗದ ಅಭಿಯಂತರರು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಚಾರಿಸಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಕುಮಾರಿ ಭುವನ ಜೆ. ಎಸ್. ಸಹಾಯಕ ಅಭಿಯಂತರರು, ಬೃನೀ..ಕಾ. ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ ರವರಿಗೆ ತಿಳಿಸಿದರು.
- ಕುಮಾರಿ ಭುವನ ಜೆ. ಎಸ್. ಸಹಾಯಕ ಅಭಿಯಂತರರು, ಬೃನೀ..ಕಾ. ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ ರವರು ಮಾತನಾಡುತ್ತಾ, ಈ ಬಗ್ಗೆ ಶ್ರೀ ಬಾಹುಬಲಿ ರವರು ನಮ್ಮ ಕಛೇರಿಯಲ್ಲಿ ಸಲ್ಲಿಸಿರುವ ದೂರು ಪತ್ರದಂತೆ ಸರ್ವೇಯರ್ ವಿಭಾಗಕ್ಕೆ ಸರ್ವೇ ಮಾಡಿಕೊಡುವಂತೆ ಈ ಹಿಂದೆ ಪತ್ರ ಬರೆಯಲಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಪ್ರತೀ ಸಭೆಯ ಸಭಾ ನಡವಳಿಗಳನ್ನು ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿರವರಿಗೆ ಸೂಚಿಸಿದರು. ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾ ನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು, ಸದರಿ ದೂರುಗಳ ಬಗ್ಗೆ ಕ್ರಮವಹಿಸಿರುವ ಕುರಿತು ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ **ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ** ವರದಿ ಮಾಡಲು ಹಾಗೂ **ವಾರ್ಡ್ ಕಮಿಟಿ ವಾರ್ಡ್-75 ವಾಟ್ಸ್‌ಆಪ್ ಗ್ರೂಪ್** ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ನೋಡಲ್ ಅಧಿಕಾರಿರವರ ಅನುಮೋದನೆ ಮೇರೆಗೆ )

15/11/2022

**ಕಾರ್ಯದರ್ಶಿ**

ಹಾಗೂ ಸಹಾಯಕ ಅಭಿಯಂತರರು

ವಾರ್ಡ್ ಸಂಖ್ಯೆ: 75

**ಪ್ರತಿಯನ್ನು :-**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ಪು.ತಿ.ನೋ.

Scanned by CamScanner

11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Scanned by CamScanner